ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
ನಂ: 14393
ದಿನಾಂಕ: 17/10/18
ಬೆಂಗಳೂರು

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** M/s Bharti Airtel Ltd., ಗೆ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ಕಮ್ಮಾರವರಿಪಲ್ಲಿ ಗ್ರಾಮದಲ್ಲಿ ಹಂಚಿಕೆಯಾಗಿರುವ 6 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆಯ ಹಂಚಿಕೆ ಆದೇಶವನ್ನು ರದ್ದುಗೊಳಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ : ಇಎನ್ 320 ಎನ್‌ಸಿಇ 2016, ದಿ; 04.02.2017.
2. ತಿದ್ದುಪಡಿ ಆದೇಶ ಸಂಖ್ಯೆ : ಇಎನ್ 320 ಎನ್‌ಸಿಇ 2016, ದಿ; 16.02.2017.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಪತ್ರ ಸಂಖ್ಯೆ: ಕೆ.ಆರ್.ಇ.ಡಿ/ಎಸ್‌ಜಿ/ಎಫ್-484/2018-19/6326, ದಿನಾಂಕ: 18.09.2018.

* * *

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ಆದೇಶದ ಮೂಲಕ M/s Bharti Airtel Ltd., ಗೆ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ಕಮ್ಮಾರವರಿಪಲ್ಲಿ ಗ್ರಾಮದಲ್ಲಿ ಕೆಲವು ಷರತ್ತುಗಳಿಗೊಳಪಟ್ಟು 6 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ವಂತಕ್ಕೆ ಉಪಯೋಗಿಸಿಕೊಳ್ಳಲು ನಿರಾಕ್ಷೇಪಣೆಯನ್ನು ನೀಡಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ತಿದ್ದುಪಡಿ ಆದೇಶದ ಮೂಲಕ ಸದರಿ ಯೋಜನೆಯ ಪ್ರದೇಶವನ್ನು ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ಕಮ್ಮಾರವರಿಪಲ್ಲಿ ಗ್ರಾಮದ ಬದಲಾಗಿ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಸುಂಕರ್ಲಕುಂಟೆ ಗ್ರಾಮಕ್ಕೆ ಬದಲಾಯಿಸಲಾಗಿತ್ತು.

ಸದರಿ ಯೋಜನೆಯನ್ನು ಕಾರಣಾಂತರಗಳಿಂದ ಅನುಷ್ಠಾನಗೊಳಿಸಲು ಸಾಧ್ಯವಾಗುವುದಿಲ್ಲವಾದ್ದರಿಂದ ಸದರಿ ಯೋಜನೆಯ ಹಂಚಿಕೆಗೆ ಸಲ್ಲಿಸಿರುವ ಅರ್ಜಿಯನ್ನು ರದ್ದು ಎಂದು ತಿಳಿದುಕೊಳ್ಳಬೇಕೆಂದು M/s Bharti Airtel Ltd., ರವರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮನವಿಯನ್ನು ಸಲ್ಲಿಸಿರುವುದರಿಂದ M/s Bharti Airtel Ltd., ರವರಿಗೆ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಸುಂಕರ್ಲಕುಂಟೆ ಗ್ರಾಮದಲ್ಲಿ ಸ್ವಂತಕ್ಕೆ ಉಪಯೋಗಿಸಿಕೊಳ್ಳಲು ಹಂಚಿಕೆಯಾಗಿರುವ 6 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಉತ್ಪಾದನಾ ಯೋಜನೆಯನ್ನು ರದ್ದುಪಡಿಸಿ ಆದೇಶವನ್ನು ಹೊರಡಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದ ಮೂಲಕ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಎನ್ 535 ಎನ್‌ಸಿಇ 2018,**

**ಬೆಂಗಳೂರು, ದಿನಾಂಕ: 12.10.2018.**

MD KREDL

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s Bharti Airtel Ltd., ಕಂಪನಿಗೆ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಸುಂಕರ್ಲಕುಂಟೆ ಗ್ರಾಮದಲ್ಲಿ ಕೆಲವು ಷರತ್ತಿಗೊಳಪಟ್ಟು ಸ್ವಂತಕ್ಕೆ

17-10-18
GM (Tech) KREDL
AGM-S9

...2)

ಉಪಯೋಗಿಸಿಕೊಳ್ಳಲು ಹಂಚಿಕೆಯಾಗಿರುವ 6 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಉತ್ಪಾದನಾ ಯೋಜನೆಯನ್ನು ಈ ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಗೊಳಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ವಿ.ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

**ಇವರಿಗೆ:**
ಸಂಕಲನಕಾರರು, ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಪ್ರಕಟಣೆಗಾಗಿ.

ಪ್ರತಿ:

1 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ / ಕಂದಾಯ ಇಲಾಖೆ/ ಬಹುಮಹಡಿ ಕಟ್ಟಡ/ ವಿಕಾಸ ಸೌಧ, ಬೆಂಗಳೂರು-1.
2 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು-9.
3 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ನಂ.82, ಶಕ್ತಿ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001.
4 ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು.
5 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು.
6 ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.
7 ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.
8 ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಬೆಂಗಳೂರು.
9 M/s Bharti Airtel Ltd., No:55, Divyashree Towers, Bannerghatta Road, Bangalore-29.
11 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
12 ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
13 ಶಾಖಾ ರಕ್ಷಾ ಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: M/s Bharti Airtel Ltd., ರವರಿಗೆ ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲೂಕಿನ ಕಮ್ಮಾರವರಿಪಲ್ಲಿ ಗ್ರಾಮದಲ್ಲಿ 6 ಮೆ.ವ್ಯಾ., ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

ಓದಲಾಗಿದೆ: 1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರು ಏಕ ಕಡತ ಪದ್ಧತಿಯಡಿ ಸರ್ಕಾರಕ್ಕೆ ಸಲ್ಲಿಸಿರುವ ಕಡತ ಸಂಖ್ಯೆ: 484.

2. ದಿನಾಂಕ: 19.12.2016 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿ.

* * *

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
ನಂ. 433
ದಿನಾಂಕ 8/2/17
ಬೆಂಗಳೂರು

**ಪ್ರಸ್ತಾವನೆ :-**

M/s Bharti Airtel Ltd., ರವರಿಗೆ ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲೂಕಿನ ಕಮ್ಮಾರವರಿಪಲ್ಲಿ ಗ್ರಾಮದಲ್ಲಿ 6 ಮೆ.ವ್ಯಾ., ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನು ಸ್ವತಂತ್ರ ವಿದ್ಯುತ್ ಉತ್ಪಾದನೆ ಮಾದರಿಯಲ್ಲಿ (Independent Power Producer) ಸ್ಥಾಪಿಸಲು ಮತ್ತು ಅದರಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ಸ್ವಂತಕ್ಕೆ ಉಪಯೋಗಿಸಿಕೊಳ್ಳಲು (Captive use) ಅನುಮತಿ ಕೋರಿರುವುದಾಗಿ ತಿಳಿಸಿ, ಸದರಿ ಪ್ರಸ್ತಾವನೆಯನ್ನು ಯೋಜನೆಯ ಸ್ಥಳದ ವಿವರಗಳು ಮತ್ತು ಈ ಕೆಳಕಂಡ ಮಾಹಿತಿಗಳೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ರವರು ಏಕ ಕಡತ ಪದ್ಧತಿಯಡಿ ಮೇಲೆ ಓದಲಾದ (1) ರ ಕಡತದಲ್ಲಿ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

| | | |
|---|---|---|
| ಯೋಜನಾ ಪ್ರದೇಶದ ವಿವರ | : | ಜಿಲ್ಲೆ : ಚಿಕ್ಕಬಳ್ಳಾಪುರ<br>ತಾಲ್ಲೂಕು : ಬಾಗೇಪಲ್ಲಿ<br>ಗ್ರಾಮ : ಕಮ್ಮಾರವರಿಪಲ್ಲಿ |
| ಯೋಜನಾ ಜಮೀನಿನ ವಿವರ | : | ಖಾಸಗಿ ಜಮೀನು |
| ಕಂಪನಿಯ ಶಾಶ್ವತ ಆದಾಯ ತೆರಿಗೆ ಪಾವತಿ ಖಾತೆ ಸಂಖ್ಯೆ | : | AAACB2894G |
| CIN ಸಂಖ್ಯೆ | : | L74899DL1995PLC070609 |
| ಯೋಜನಾ ಪ್ರದೇಶದ ಸಮೀಪವಿರುವ ಸಬ್ ಸ್ಟೇಷನ್ | : | Chakvel |
| ಉತ್ಪಾದನೆಯಾಗುವ ವಿದ್ಯುತ್ತಿನ ಉಪಯೋಗದ ವಿಧಾನ | : | Group Captive use |
| ನಿಗದಿತ ಶುಲ್ಕ ಪಾವತಿಸಲಾಗಿದೆಯೇ | : | ಅರ್ಜಿ ನೋಂದಣಿ ಶುಲ್ಕ ಪಾವತಿಸಿದೆ |

M/s Bharti Airtel Ltd., ರವರಿಗೆ ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲೂಕಿನ ಕಮ್ಮಾರವರಿಪಲ್ಲಿ ಗ್ರಾಮದಲ್ಲಿ 6 ಮೆ.ವ್ಯಾ., ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನು ಸ್ವತಂತ್ರ ವಿದ್ಯುತ್ ಉತ್ಪಾದನೆ ಮಾದರಿಯಲ್ಲಿ (Independent Power Producer) ಸ್ಥಾಪಿಸಿ, ಅದರಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ಸ್ವಂತಕ್ಕೆ ಉಪಯೋಗಿಸಿಕೊಳ್ಳಲು (Captive use) ನಿರಾಕ್ಷೇಪಣೆಯನ್ನು ನೀಡುವ ಕುರಿತಾದ ಮೇಲ್ಕಂಡ ಪ್ರಸ್ತಾವನೆಯನ್ನು ಮೇಲೆ ಓದಲಾದ (2) ರಂತೆ ದಿನಾಂಕ: 19.12.2016 ರಂದು ನಡೆದ ಹಂಚಿಕೆ ಸಮಿತಿ ಸಭೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಸರ್ವಾನುಮತದಿಂದ ಶಿಫಾರಸ್ಸು ಮಾಡಲಾಗಿರುತ್ತದೆ. ಸದರಿ ಶಿಫಾರಸ್ಸಿನಂತೆ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಇಎನ್ 320 ಎನ್‌ಸಿಇ 2016,**

**ಬೆಂಗಳೂರು, ದಿನಾಂಕ: 04.02.2017.**

M/s Bharti Airtel Ltd., ರವರಿಗೆ ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲೂಕಿನ ಕಮ್ಮಾರವರಿಪಲ್ಲಿ ಗ್ರಾಮದಲ್ಲಿ 6 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನು ಸ್ವತಂತ್ರ ವಿದ್ಯುತ್ ಉತ್ಪಾದನೆ ಮಾದರಿಯಲ್ಲಿ (Independent Power Producer) ಸ್ಥಾಪಿಸಲು ಹಾಗೂ ಅದರಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ಸ್ವಂತಕ್ಕೆ ಉಪಯೋಗಿಸಿಕೊಳ್ಳಲು (Captive use) ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ **ನಿರಾಕ್ಷೇಪಣೆಯನ್ನು** ನೀಡಲಾಗಿದೆ.

1. ಅಭಿವೃದ್ಧಿದಾರರು ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಸಂಬಂಧಿಸಿದ ಇಲಾಖೆಗಳ/ ಸಂಸ್ಥೆಗಳ ಅನುಮೋದನೆ ಪಡೆದುಕೊಳ್ಳತಕ್ಕದ್ದು;

GM (Tech) I/C
KREDL

2. M/s Bharti Airtel Ltd., ರವರು ಸೌರ ನೀತಿ 2014-21 ರನ್ವಯ ಈ ಬಾಬ್ತು ಅನ್ವಯಿಸುವ ಶುಲ್ಕ ಹಾಗೂ ಇತರ ಬ್ಯಾಂಕ್ ಖಾತರಿಯನ್ನು ಕೆ.ಆರ್.ಇ.ಡಿ.ಎಲ್.ಗೆ ಪಾವತಿಸತಕ್ಕದ್ದು;
3. ಪ್ರಸ್ತಾಪಿತ ಸ್ವತಂತ್ರ ವಿದ್ಯುತ್ ಉತ್ಪಾದನೆ ಮಾದರಿಯ (Independent Power Producer) ಸೋಲಾರ್ ಘಟಕದಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು M/s Bharti Airtel Ltd., ರವರು ಸ್ವಂತಕ್ಕೆ ಉಪಯೋಗಿಸಿಕೊಳ್ಳಲು (Captive use) ಹಾಗೂ ಈ ಸಂಬಂಧ ಅಗತ್ಯವಿರುವ ವಿದ್ಯುತ್ ಜಾಲಕ್ಕೆ ಜೋಡಣೆ ಮಾಡಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಮತ್ತು ಬ್ಯಾಂಕಿಂಗ್ ಒಪ್ಪಂದ ಮಾಡಿಕೊಳ್ಳಲು ಅನುಮತಿಸಿದೆ.
4. M/s Bharti Airtel Ltd., ರವರು ಪ್ರಸ್ತಾಪಿತ ಸೌರ ವಿದ್ಯುತ್ ಘಟಕವನ್ನು ಸ್ಥಾಪಿಸಲು ಅಗತ್ಯವಿರುವ ಜಮೀನನ್ನು ಕರ್ನಾಟಕ ಭೂ-ಸುಧಾರಣೆ ಕಾಯ್ದೆಯನ್ವಯ ಖರೀದಿಸತಕ್ಕದ್ದು ಮತ್ತು ಸದರಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿಕೊಂಡ ನಂತರವೇ ಸೌರ ವಿದ್ಯುತ್ ಘಟಕಗಳನ್ನು ಸ್ಥಾಪಿಸತಕ್ಕದ್ದು;
5. M/s Bharti Airtel Ltd., ರವರ ಕಂಪನಿಯು ಸ್ಥಾಪಿಸುತ್ತಿರುವ ಈ ಸೌರ ವಿದ್ಯುತ್ ಘಟಕಕ್ಕೆ ಸರ್ಕಾರದ 2014-21 ರ ಸೋಲಾರ್ ನೀತಿ ಹಾಗೂ ಸರ್ಕಾರದ 2014-19 ರ ಕೈಗಾರಿಕಾ ನೀತಿಗಳ ಪ್ರಕಾರ ಅನ್ವಯವಾಗುವ ಸವಲತ್ತುಗಳು ಲಭ್ಯವಾಗುತ್ತವೆ.
6. ಪ್ರಸ್ತಾಪಿತ ಸೌರ ವಿದ್ಯುತ್ ಘಟಕವನ್ನು ಆದೇಶ ಹೊರಡಿಸಿದ ದಿನಾಂಕದಿಂದ 18 ತಿಂಗಳೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ರದ್ದು ಮಾಡುವ / ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ವಿ.ಶ್ರೀನಿವಾಸಯ್ಯ),
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

**ಇವರಿಗೆ:**
ಸಂಕಲನಕಾರರು, ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಪ್ರಕಟಣೆಗಾಗಿ.

**ಪ್ರತಿ:**
1 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ / ಕಂದಾಯ ಇಲಾಖೆ/ ಬಹುಮಹಡಿ ಕಟ್ಟಡ/ ವಿಕಾಸ ಸೌಧ, ಬೆಂಗಳೂರು-1.
2 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು-9.
3 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ನಂ.82, ಶಕ್ತಿ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001.
4 ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು.
5 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು.
6 ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.
7 ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.
8 ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಬೆಂಗಳೂರು.
9 M/s Bharti Airtel Ltd., No:55, Divyashree Towers, Bannerghatta Road, Bangalore-29.
10 ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
11 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
12 ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
13 ಶಾಖಾ ರಕ್ಷಾ ಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.